**CC. NO. 76/2022**
<u>ಪಿಡಬ್ಲ್ಯೂಃ 2</u>

ದಿನಾಂಕಃ **27-03-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಚ್ . ಎಮ್. ಪಿ ವಕೀಲರಿಂದಃ</u>

1. ನನ್ನ ಪ್ರಮಾಣ ಪತ್ರದಲ್ಲಿ ಆರೋಪಿ ನೀಡಿದ್ದರು ಎಂದು ಹೇಳಲಾದ ಚೆಕ್ಕಿನ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ನನಗೆ ಕಳೆದ 10-20 ವರ್ಷಗಳಿಂದ ಆರೋಪಿಯ ಪರಿಚಯವಿದೆ. ಆರೋಪಿ ಮದ್ಯದ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ. ಆರೋಪಿ ತನ್ನ ಚೆಕ್ಕಗಳಲ್ಲಿ ಮೊತ್ತ ಹಾಗೂ ದಿನಾಂಕ ನಮೂದಿಸಿ ದೂರುದಾರರಿಗೆ ಕೊಟ್ಟಿದ್ದರು. ಒಟ್ಟು ರೂ. 5 ಲಕ್ಷ ಮೊತ್ತದ ಚೆಕ್ಕು ಕೊಟ್ಟಿದ್ದರು ಆದರೆ ಒಂದೊಂದು ಚೆಕ್ಕಿನಲ್ಲಿ ನಿಖರವಾಗಿ ಎಷ್ಟು ಮೊತ್ತ ನಮೂದಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ದೂರುದಾರ ಹಾಗೂ ಆರೋಪಿ ಸೇರಿ ಕರಾರು ಪತ್ರವನ್ನು ತಯಾರಿಸಿಕೊಂಡು ಬಂದಿದ್ದರು, ಅದನ್ನು ನನ್ನ ಮುಂದೆ ತಯಾರಿಸಿಲ್ಲ. ಸನಃ 2020 ರ ಡಿಸೆಂಬರನಲ್ಲಿ ಲಾಕಡೌನ ಇತ್ತು ಎಂದರೆ ಸರಿ. ಆದ್ದರಿಂದ ಆ ಸಮಯದಲ್ಲಿ ಯಾವುದೇ ಅಂಗಡಿ ತೆರೆದಿರುತ್ತಿರಲಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದ ಮೇಲೆ ನನ್ನ ಅಂಗಡಿಯಲ್ಲಿಯೇ ಸಹಿ ಮಾಡಿದ್ದರು. ನಿಪಿ-1(ಎ) ಹಾಗೂ ನಿಪಿ-6(ಬಿ) ರಲ್ಲಿನ ಸಹಿಗಳು ಬೇರೆ-ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. ದೂರುದಾರ ಹಾಗೂ ಆರೋಪಿ ನನ್ನ ಅಂಗಡಿಗೆ ಬಂದಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಮುಖ್ಯ ವಿಚಾರಣೆಯ ಸಮಯದಲ್ಲಿ ನ್ಯಾಯಾಲಯಕ್ಕೆ ಬಂದಾಗ ಮೊದಲ ಬಾರಿಗೆ ನೋಡಿರುತ್ತೇನೆ ನನಗೆ ಆತನ ಪರಿಚಯವಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ದೂರುದಾರರಿಂದ ನನ್ನ ಸಮಕ್ಷಮ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ